

# ಜಿಐ ಟ್ಯಾಗ್ ಗರಿಮೆಯ ಶಿರಸಿ ಅಡಿಕೆ

ಮಲೆನಾಡಿನ ಪ್ರಮುಖ ವಾಣಿಜ್ಯ ಬೆಳೆ ಅಡಿಕೆ. ಶಿರಸಿ, ಸಿದ್ದಾಪುರ ಮತ್ತು ಯಲ್ಲಾಪುರ ಭಾಗದಲ್ಲಿ ಬೆಳೆಯುವ ಅಡಿಕೆ ಜಿಐ ಟ್ಯಾಗ್‌ನ ಮಾನ್ಯತೆ ಹೊಂದಿದೆ. ಈ ಮಾನ್ಯತೆಯಿಂದಾಗಿ ನಕಲಿ ಅಡಿಕೆಗಳ ಮಾರಾಟಕ್ಕೆ ತಡೆ ಬೀಳುತ್ತಿದೆ. ಜತೆಗೆ ಪ್ರತ್ಯೇಕ ಬ್ರ್ಯಾಂಡ್ ಮೌಲ್ಯ ಸಿಗುತ್ತಿದೆ.






■ ಪವಿತ್ರಾ ಭಟ್

ಮಲೆನಾಡು ಅಂದರೇನೇ ಹಾಗೆ. ಮಂಜು ಮುಸುಕಿದ ಬೆಟ್ಟಗಳು, ಹರಿವ ತೊರೆಗಳು, ಸಾಲು ಸಾಲು ಅಡಿಕೆ ತೋಟಗಳು, ಹಸಿರಿನಿಂದ ಕಂಗೊಳಿಸುವ ಭತ್ತದ ಗದ್ದೆಗಳು, ಅಲ್ಲಲ್ಲಿ ಕಾಣುವ ಹೆಂಚಿನ ಮನೆಗಳು... ಮನೆ ಮುಂದೆ ಬಣ್ಣ ಬಣ್ಣದ ಹೂವುಗಳು...

ಬಹುತೇಕ ಮನೆ ಬಳಿಯೇ ಅಡಿಕೆ ತೋಟ. ಅಡಿಕೆ ಎಂದರೆ ಕೇವಲ ಒಂದು ಬೆಳೆಯಲ್ಲ, ಅದು ಮಲೆನಾಡಿಗರ ಜೀವನಾಡಿ. ದೀಪಾವಳಿ ಮುಗಿದು ಚಳಿಗಾಲ ಆರಂಭವಾಗುತ್ತಿದ್ದಂತೆ ಕೊನೆ ಕೊಯ್ಲಿನ ಸಂಭ್ರಮ. ವಾರ್ಷಿಕ ಬೆಳೆಯನ್ನು ಒಪ್ಪವಾಗಿ ಕೂಡಿಡಲು ಬಿಡುವಿಲ್ಲದ ಓಡಾಟ. ತಮ್ಮ ಬೆಳೆಯನ್ನು ಆರಾಧಿಸುವ ಮಲೆನಾಡಿನ ರೈತರಿಗೆ ಅಡಿಕೆ ತಾಯಿಯಂತೆ.

ರಾಜ್ಯದ ವಿವಿಧ ಪ್ರದೇಶಗಳಲ್ಲಿ ಅಡಿಕೆ ಬೆಳೆಯುತ್ತಾರಾದರೂ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ ಮತ್ತು ಯಲ್ಲಾಪುರ ಭಾಗದಲ್ಲಿ ಬೆಳೆಯುವ ಅಡಿಕೆ ನೈಸರ್ಗಿಕವಾದ ಗಾಢ ಬಣ್ಣ ಮತ್ತು ವಿಶಿಷ್ಟ ರುಚಿ, ಗುಣಲಕ್ಷಣ ಹೊಂದಿದೆ. ಅಲ್ಲದೆ ಇಲ್ಲಿಯ ಚಪ್ಪಟೆಯಾಕಾರದ ಅಡಿಕೆ ರಾಜ್ಯದಲ್ಲಿ ಮತ್ತೆಲ್ಲೂ ಸಿಗದು. ಹೀಗಾಗಿಯೇ 2019ರಲ್ಲಿ ಕೇಂದ್ರ ಸರ್ಕಾರ ಈ ಅಡಿಕೆಗೆ ಭೌಗೋಳಿಕ ಸೂಚ್ಯಂಕ (ಜಿಯಾಗ್ರಫಿಕಲ್ ಇಂಡಿಕೇಷನ್ ಟ್ಯಾಗ್– ಜಿಐ ಟ್ಯಾಗ್) ಮಾನ್ಯತೆ ನೀಡಿದೆ. ಇಲ್ಲಿ ಕೆಂಪಡಿಕೆ ಮತ್ತು ಚಾಲಿ ಎಂದು ಎರಡು ವಿಧಗಳಿದ್ದು, ಈ ಅಡಿಕೆ 'ಶಿರಸಿ ಸುಪಾರಿ' ಎಂದೇ ಪ್ರಸಿದ್ಧ. ಅಡಿಕೆ ವಲಯದಲ್ಲಿ ಈ ಗೌರವ ಪಡೆದ ದೇಶದ ಮೊದಲ ಉತ್ಪನ್ನ ಎಂಬ ಖ್ಯಾತಿ ಶಿರಸಿ ಅಡಿಕೆಯದ್ದು.

ಶಿರಸಿಯ ಟಿಎಸ್‌ಎಸ್ (ತೋಟಗಾರ್ಸ್ ಕೋ ಆಪರೇಟಿವ್ ಸೇಲ್ ಸೊಸೈಟಿ ಲಿಮಿಟೆಡ್) ಈ ಜಿಐ ಟ್ಯಾಗ್‌ನ ಮಾನ್ಯತೆ ಹೊಂದಿದೆ. ಈ



ಶಿರಸಿ ಸುಪಾರಿ